ಸಾಕ್ಷಿಯನ್ನು ದಿನಾಂಕಃ 07-10-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ವಿ.ಎಸ್ 3 ನೇ ಪ್ರತಿವಾದಿ ಪರ ವಕೀಲರಿಂದಃ

(ಈ ಹಂತದಲ್ಲಿ 3 ನೇ ಪ್ರತಿವಾದಿ ಪರ ವಕೀಲರು ಗೈರಾಗಿರುವುದರಿಂದ , ಮತ್ತು ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.)

ಪಾಟೀ ಸವಾಲುಃ ಶ್ರೀ ಎಂ.ಎಲ್.ಎನ್ 1 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಒಟ್ಟು 4 ಜನರ ಹೆಸರು ಇರುತ್ತದೆ. ಈ 4 ಜನರು ಒಂದೇ ಕುಟುಂಬಕ್ಕೆ ಸಂಬಂಧಪಟ್ಟವರಾಗಿದ್ದಾರೆ. ಈ 4 ಜನರಿಗೆ ದಾವಾ ಆಸ್ತಿಯಲ್ಲಿ ಹಕ್ಕಿದೆ. ಈ ಮೇಲೆ ಹೇಳಿದ 4 ಜನರಲ್ಲಿ, ರಮೇಶ ಮಹಾಬಲೇಶ್ವರ ಭಾಗವತ ಈತನು ಬೇರೆ ಕಡೆ ವಾಸವಿದ್ದು , ಇನ್ನುಳಿದ 3 ಜನರು ನೀಲಕೋಡ ಗ್ರಾಮದಲ್ಲಿ ವಾಸವಿರುತ್ತಾರೆ. ದಾವಾ ಆಸ್ತಿಯು ಖುಷ್ಕಿ ಜಮೀನು ಆಗಿದ್ದು , ಅದರಲ್ಲಿ ಯಾವುದೇ ಮನೆ ಮತ್ತು ಕಟ್ಟಡಗಳು ಇರುವುದಿಲ್ಲ. ಸದ್ರಿ ದಾವಾ ಸ್ಥಳದ ಸುತ್ತ ಸ್ವಲ್ಪ ಬೇಲಿ ಇದ್ದು , ಇನ್ನು ಸ್ವಲ್ಪ ಕಾರಿಗೆ ಇರುತ್ತದೆ. ದಾವಾ ಸಲ್ಲಿಸುವಾಗ ನಾವು ದಾವಾ ಆಸ್ತಿಯ ವಸ್ತು ಸ್ಥಿತಿಯನ್ನು ಗುರುತಿಸುವ ಬಗ್ಗೆ ಹಾತ್ ನಕಾಶೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರ ಬಗ್ಗೆ ನನಗೆ ನೆನಪಿಲ್ಲ. ನಾವು ದಾವಾ ಸಲ್ಲಿಸುವಾಗ ನ್ಯಾಯಾಲಯದಿಂದ ಒಬ್ಬ ವಕೀಲರನ್ನು ನೇಮಿಸಿ ದಾವಾ ಸ್ಥಳದ ವಸ್ತು ಸ್ಥಿತಿಯನ್ನು ಗುರುತಿಸುವಂತೆ ಅರ್ಜಿಯನ್ನು ನೀಡಿದ್ದು ಇರುವುದಿಲ್ಲ. ದಾವಾ ಸ್ಥಳದ ವಸ್ತು ಸ್ಥಿತಿಯನ್ನು ನ್ಯಾಯಾಲಯದ ಮುಂದೆ ತೋರಿಸಲು ನಾವು ಯಾವುದೇ ಫೋಟೋಗಳನ್ನು ತೆಗೆದಿದ್ದು ಇರುವುದಿಲ್ಲ. ದಾವಾ ಸ್ಥಳದ ಸುತ್ತಮುತ್ತ , ಮತ್ತು ದಾವಾ ಸ್ಥಳದ ವಸ್ತು ಸ್ಥಿತಿಯನ್ನು ತಿಳಿದುಕೊಳ್ಳಲು ನ್ಯಾಯಾಲಯಕ್ಕೆ ಒಬ್ಬ ವಕೀಲರನ್ನು ನೇಮಿಸುವಂತೆ ಅರ್ಜಿ ಸಲ್ಲಿಸಲು ನನ್ನದೇನು ಆಕ್ಷೇಪಣೆ ಇರುವುದಿಲ್ಲ. 1 ನೇ ಪ್ರತಿವಾದಿಯು ಸದ್ರಿ ದಾವೆಗೆ ಹಾಕಿದ ತಕರಾರನ್ನು ಸ್ವಲ್ಪ ಮಟ್ಟಿಗೆ ನಾನು ನನ್ನ ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. 1 ನೇ ಪ್ರತಿವಾದಿಯು ತನ್ನ ತಕರಾರಿನ ಜೊತೆ ಸಲ್ಲಿಸಿರುವ ಹಾತ್ ನಕಾಶೆಯನ್ನು ನಾನು ನೋಡಿದ್ದು ಇರುವುದಿಲ್ಲ. 1 ನೇ ಪ್ರತಿವಾದಿಯು ಹಾಜರುಪಡಿಸಿರುವ ನಕಾಶೆಯು ಸರಿಯಿಲ್ಲವೆಂದು ನಾವು ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡಿದ್ದು ಇರುವುದಿಲ್ಲ. ನಾವು ವಾಸವಿರುವ ಮನೆಯು ಸರ್ವೇ ನಂಬರ್ 102 ರಲ್ಲಿ ಇರಬಹುದು. 1 ನೇ ಪ್ರತಿವಾದಿಯ ಮನೆಯು ನಾವು ವಾಸವಿರುವ ಮನೆಯಿಂದ ಉತ್ತರ ದಿಕ್ಕಿಗೆ 4 ಪರ್ಲಾಂಗ್ ದೂರದಲ್ಲಿದೆ. 2 ನೇ ಪ್ರತಿವಾದಿಯ ಮನೆಯು ನಾವು ವಾಸವಿರುವ ಮನೆಯಿಂದ ಉತ್ತರ ದಿಕ್ಕಿಗೆ 4 ಪರ್ಲಾಂಗ್ ದೂರದಲ್ಲಿದೆ. ನಮ್ಮ ಮನೆಗೆ ಹೋಗಿ ಬಂದು ಮಾಡಲಿಕ್ಕೆ ದಕ್ಷೀಣದಿಂದ ಉತ್ತರ ದಿಕ್ಕಿಗೆ ಹಾದು ಹೋಗಿರುವ ಕಾಲು ದಾರಿಯಲ್ಲಿ ಅವಲಂಬಿಸಿದ್ದೇವೆ. ಅಲ್ಲಿರುವ ರಸ್ತೆಗೆ ಕೋಳಿ ಬೋಳ ಎಂದು ಹೆಸರಿದೆ. ಸದ್ರಿ ರಸ್ತೆಯು ಮಣ್ಣು ರಸ್ತೆಯಾಗಿದೆ. ಸದ್ರಿ ರಸ್ತೆಯು ಅಂದಾಜು 5-6 ವರ್ಷದಿಂದ ಇರಬಹುದು. ನಾವು ಈ ರಸ್ತೆಯ ಪೂರ್ವದಲ್ಲಿ , ಮೇಲೆ ಹೇಳಿರುವ ರಸ್ತೆಯು ಕಾಲು ದಾರಿ ಆಗಿದ್ದರಿಂದ ಅದನ್ನು ಅವಲಂಬಿಸಿದ್ದೇವು. ಸದ್ರಿ ರಸ್ತೆಯ ಮೇಲೆ ನಾವು ಸ್ವಪ್ನಿನ ಗಂಟುಗಳನ್ನು , ಮತ್ತು ಕಟ್ಟಿಗೆಯನ್ನು ಹೊತ್ತುಕೊಂಡು ಸಾಗಿಸುತ್ತಿದ್ದೇವು. ಸದ್ರಿ ರಸ್ತೆಯು 1 1/2 ಫೂಟ್ ಅಗಲ

ಇರಬಹುದು. ಕೋಳಿ ಬೋಳ ರಸ್ತೆಯನ್ನು ಪಂಚಾಯತನವರು ಮಾಡಿರುತ್ತಾರೆ. ಕೋಳಿ ಬೋಳ ರಸ್ತೆಯು ಮುಖ್ಯ ರಸ್ತೆಯಾಗಿದ್ದು , ಅದರಿಂದ ಆ ನಂತರ ಕಾಲು ದಾರಿಯ ಮುಖಾಂತರ ನಮ್ಮ ಮನೆಗೆ ಹೋಗುತ್ತೇವೆ. ಕೋಳಿ ಬೋಳ ರಸ್ತೆಯನ್ನು ಗ್ರಾಮ ಪಂಚಾಯತನವರು ಮಾಡಿದ್ದಾರೆ ಎಂದರೆ ಸರಿ. ಸದ್ರಿ ರಸ್ತೆಯನ್ನು 6-5 ವರ್ಷದ ಹಿಂದೆ ಮಾಡಿದ್ದಾರೆ. 2 ನೇ ಮತ್ತು 3 ನೇ ಪ್ರತಿವಾದಿಯರು ಸರ್ವೇ ನಂಬರ್ 136 ರಲ್ಲಿರುವ ಕಾಲುದಾರಿಯಲ್ಲಿ ಓಡಾಡುತ್ತಾರೆ. ಅವರು ತಿರುಗಾಡುತ್ತಿರುವ ಕಾಲು ದಾರಿಗೆ ಯಾವುದೇ ಹೆಸರಿಲ್ಲ. ಬಂಗಾರಮಕ್ಕಿ ರಸ್ತೆ ಎಂದರೆ ಅದು ಹಳ್ಳದ ಆಚೆಗೆ ಬರುತ್ತದೆ, ಮತ್ತು ಕೋಳಿ ಬೋಳ ರಸ್ತೆಯು ಹಳ್ಳದ ಈ ಕಡೆಗೆ ಬರುತ್ತದೆ. ನಮ್ಮ ಸರ್ವೇ ನಂಬರನ ಉತ್ತರ ದಿಕ್ಕಿಗೆ ಹಳ್ಳ ಇದೆ. ನಮ್ಮ ಸರ್ವೇ ನಂಬರನ ಪಕ್ಕ ಇರುವ ಹಳ್ಳವು ವಕ್ರವಾಗಿದ್ದು , ಅದರ ನಿರ್ದಿಷ್ಟ ದಿಕ್ಕನ್ನು ಹೇಳಲು ಆಗುವುದಿಲ್ಲ. ಹಾತ್ ನಕಾಶೆಯಲ್ಲಿ ತೋರಿಸಿರುವ ರಸ್ತೆಯು ಕೋಳಿ ಬೋಳ ರಸ್ತೆ ಆಗಿರುತ್ತದೆ. ದಾವಾ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಜೆ.ಸಿ.ಬಿ ಮುಖಾಂತರ ಹೊಸದಾಗಿ ರಸ್ತೆಯನ್ನು ನಿರ್ಮಿಸಲು ಮುಂದಾಗಿದ್ದರಿಂದ ನಾನು ಈ ದಾವೆಯನ್ನು ಹೂಡಿದ್ದೇನೆ. ನಾವು ಅದಕ್ಕೆ ತಕರಾರನ್ನು ವ್ಯಕ್ತಪಡಿಸಿದಾಗ ಅವರು ನಂತರದಲ್ಲಿ ರಸ್ತೆಯನ್ನು ಮಾಡಿದ್ದು ಇರುವುದಿಲ್ಲ. ಅವರು ಜೆ.ಸಿ.ಬಿ ಮುಖಾಂತರ ಅಲ್ಲಿ 2 ಗಂಟೆಗಳ ಕಾಲ ಕೆಲಸ ಮಾಡಿದ್ದರ ಬಗ್ಗೆ ನನ್ನ ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿ ಬೇರೆ ಯಾವುದೇ ಸಾಕ್ಷ ಇರುವುದಿಲ್ಲ. ಅವರು ಅಲ್ಲಿ ಮಣ್ಣನು ಅಗೆದಿದ್ದರು. 3 ನೇ ಪ್ರತಿವಾದಿಯರಿಗೆ , 1 ಮತ್ತು 2 ನೇ ಪ್ರತಿವಾದಿಯರು ಜೆ.ಸಿ.ಬಿ ಯನ್ನು ತಂದಿದ್ದಕ್ಕೆ ಸಂಬಂಧ ಇರುವುದಿಲ್ಲ.

ದಾವಾ ಸ್ಥಳದ ಪಶ್ಚಿಮ ದಿಕ್ಕಿಗೆ ಕಾರಿಗೆ ಇಲ್ಲ ಎಂದರೆ ಸರಿಯಲ್ಲ. ಕಾರಿಗೆ ಎಂದರೆ ಗಟಾರ್ ಎಂದರ್ಥ. ಸದರಿ ಕಾರಿಗೆಯಲ್ಲಿ ಮಳೆ ಬಂದಾಗ ನೀರು ಹರಿಯುತ್ತದೆ. ಅಲ್ಲಿ ಕಾರಿಗೆ ಇಲ್ಲದೇ ಇರುವುದರಿಂದ ಅದನ್ನು ಮುಚ್ಚುವ ಪ್ರಸಂಗ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ಥಳದಿಂದ 4-5 ಫರಲಾಂಗ್ ಪ್ರತಿವಾದಿಯರ ಮನೆ ಇರುತ್ತದೆ. 1 ಫರಲಾಂಗ್ ಎಂದರೆ ಎಷ್ಟು ಮೀಟರ್ ಎಂಬುದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಮತ್ತು ಅಲ್ಲಿರುವ ಕೇರಿಯ ಜನರು ಸುಮಾರು ವರ್ಷದಿಂದ ಅಲ್ಲಿಯೇ ವಾಸವಾಗಿದ್ದರಿಂದ ಅವರು ಮೂಲ ನಿವಾಸಿ ಎಂದರೆ ಸರಿ. ಪ್ರತಿವಾದಿಯರು ತಮ್ಮ ದೈನಂದಿನ ಕೆಲಸಗಳಿಗಾಗಿ ಕೋಳಿ ಬೋಳ ರಸ್ತೆಯನ್ನು ಬಳಸುತ್ತಿದ್ದಾರೆ ಎಂದರೆ ಸರಿ. ಕೋಳಿ ಬೋಳ ರಸ್ತೆಯಲ್ಲಿ ಸರ್ವೇ ಸಾಮಾನ್ಯವಾಗಿ ಬೈಕ್ ಚಕ್ಕಡಿ ಹಾಗೂ ಇನ್ನಿತರ ವಾಹನಗಳು ಓಡಾಡುತ್ತಾವೆ ಎಂದರೆ ಸರಿ. ಪ್ರತಿವಾದಿಯು ತಮ್ಮ ಕೆಲಸ ಕಾರ್ಯಗಳಿಗಾಗಿ ಬೈಕನ್ನು ಬಳಸುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಗಳಾದ ರಮ್ಯಾ ಅವಳ ಮದುವೆಯು ದಿನಾಂಕಃ 20.04.2017 ರಲ್ಲಿ ವಿಷ್ಣು ಸಭಾ ಮಂಟಪದಲ್ಲಿ ನಡೆದಿದೆ ಎಂದಾಗ ಸಾಕ್ಷಿಯು ನಡೆದಿರಬಹುದು ಎಂದು ನುಡಿಯುತ್ತಾರೆ. ಆ ಪ್ರತಿವಾದಿಯರು ಮದುವೆಯ ಪೂರ್ವದಲ್ಲಿಯೇ ಅಂದರೆ 19-04-2017 ರಂದು ಜೆ.ಸಿ.ಬಿ ಯನ್ನು ತಂದು ಕೆಲಸವನ್ನು ಕೈಗೊಂಡಿದ್ದರು ಎಂದು ಸಾಕ್ಷಿ ನುಡಿದಿದ್ದಾರೆ. 1 ನೇ ಪ್ರತಿವಾದಿಯು ಅನಾರೋಗ್ಯದಿಂದ ಇದ್ದು ಆದರೆ ಓಡಾಡಲು ಯಾವುದೇ ತೊಂದರೆ ಇಲ್ಲ. 2 ನೇ ಪ್ರತಿವಾದಿಗೆ ವಯಸ್ಸು ಆಗಿದ್ದು ಗಂಡ ಹೆಂಡತಿ ಮಾತ್ರ ವಾಸವಿರುತ್ತಾರೆ. ಅವರ ಮಗ ಮುಂಬೈಯಲ್ಲಿ ವಾಸವಾಗಿದ್ದಾನೆ. ದಿನಾಂಕಃ 20.04.2017 ರಂದು 2 ನೇ ಪ್ರತಿವಾದಿಯು ರಮ್ಯಾ ಅವರ ಮದುವೆಗೆ ಹೋಗಿದ್ದಾರೆ ಎಂದು ಕೇಳಿದಾಗ ಸಾಕ್ಷಿಯು ಹೋಗಿರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಮತ್ತು 2 ನೇ ಪ್ರತಿವಾದಿಯು ದಿನಾಂಕಃ 20.04.2017 ರಂದು ಮದುವೆ ಸಮಾರಂಭದಲ್ಲಿ ಹಾಜರಿದ್ದು , ಅವರು ಆ ದಿನ ಜೆ.ಸಿ.ಬಿ ಯನ್ನು ತಂದು ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೋಳಿ ಬೋಳ ರಸ್ತೆಗೆ ಕಾಂಕ್ರೇಟ್ ಆಗಿದ್ದು ಇರುವುದಿಲ್ಲ. ನಾವು ಕೋಳಿ ಬೋಳ ರಸ್ತೆಯಲ್ಲಿ ತಿರುಗಾಡಲಿಕ್ಕೆ ಯಾರಿಗೂ ತೊಂದರೆ ಮಾಡಿದ್ದು ಇರುವುದಿಲ್ಲ. ಪ್ರತಿವಾದಿಯರು ನಮಗಿಂತ ಪ್ರಭಾವಿಗಳಾಗಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ನಾವು ನ್ಯಾಯಾಲಯದ ಮುಂದೆ ಯಾವುದೇ ಹಾತ್ ನಕಾಶೆಯನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಜಿ.ಸಿ.ಡಿ 2 ನೇ ಪ್ರತಿವಾದಿ ಪರ ವಕೀಲರಿಂದಃ

(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು, 1 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಒಪ್ಪಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.